# ಧಾರವಾಡ ಸಾಹಿತ್ಯ ಸಂಭ್ರಮ – ೨೦೧೭

## (ಸಂಸ್ಕೃತಿ ಸಂವಾದ)

ಆತ್ಮೀಯ ಸಾಹಿತಿಮಿತ್ರರೆ ಮತ್ತು ಸಾಹಿತ್ಯಾಸಕ್ತರೆ, ಧಾರವಾಡ ಸಾಹಿತ್ಯ ಸಂಭ್ರಮದ ಐದನೆಯ ಆವೃತ್ತಿಯಲ್ಲಿ ಭಾಗವಹಿಸಲು ಅತ್ಯಂತ ಆಸಕ್ತಿಯಿಂದ, ದೂರದೂರದ ಊರುಗಳಿಂದ ಬಂದಿರುವ ತಮಗೆಲ್ಲರಿಗೂ ಹಾರ್ದಿಕ ಸ್ವಾಗತ.

ನಾಲ್ಕು ವರ್ಷಗಳ ಹಿಂದೆ, ೨೦೧೩ರಲ್ಲಿ ಮೊದಲ ಸಲ ಸಾಹಿತ್ಯ ಸಂಭ್ರಮವನ್ನು ಆರಂಭಿಸಿದಾಗ, ಈ ಹೊಸ ಮಾದರಿಯನ್ನು ನಮ್ಮ ಜನ ಹೇಗೆ ಸ್ವೀಕರಿಸುತ್ತಾರೆ ಎಂಬ ಅಳುಕು ಇತ್ತು. ಆದರೆ ಜನಕ್ಕೆ ಹೊಸದು, ಭಿನ್ನವಾದದ್ದು ಬೇಕಾಗಿತ್ತು. ಅದನ್ನು ಸಂಭ್ರಮ ಒದಗಿಸಿತು. ಆಗ ನೀವೆಲ್ಲ ತೋರಿಸಿದ ಸಹಕಾರದಿಂದಾಗಿ ಅದು ನಮ್ಮ ನಿರೀಕ್ಷೆಗೆ ಮೀರಿದ ಯಶಸ್ಸು ಕಂಡಿತು. ‘ಪ್ರಜಾವಾಣಿ’ ಪತ್ರಿಕೆ ತನ್ನ ಸಂಪಾದಕೀಯದಲ್ಲಿ ಇದನ್ನು ‘ಅದ್ಭುತ ಯಶಸ್ಸು’ ಎಂದು ವರ್ಣಿಸಿದ್ದು ನಮಗೆಲ್ಲ ರೋಮಾಂಚನವನ್ನು ಉಂಟುಮಾಡಿತ್ತು. ಅಲ್ಲಿಂದ ನಾವು ಹಿಂದೆ ನೋಡಿಯೇ ಇಲ್ಲ. ವರುಷದಿಂದ ವರುಷಕ್ಕೆ ಸಂಭ್ರಮದ ಬಗೆಗಿನ ಸಾಹಿತ್ಯಾಸಕ್ತರ ಉತ್ಸಾಹ ಹೆಚ್ಚುತ್ತಲೇ ಇದೆ. ಈಗ ಧಾರವಾಡ ಸಾಹಿತ್ಯ ಸಂಭ್ರಮ ಕರ್ನಾಟಕದ ಮುಖ್ಯ ಸಾಂಸ್ಕೃತಿಕ ಉತ್ಸವ ಕೇಂದ್ರವಾಗಿ ಸ್ವೀಕೃತವಾಗಿದೆ.

ಈ ವರ್ಷ ಪ್ರತಿನಿಧಿಗಳಿಗಾಗಿ ಆನ್‌ಲೈನ್ ಮೂಲಕ ೩೦೦ ಅರ್ಜಿಗಳನ್ನು ಬಿಡುಗಡೆ ಮಾಡಿದ ಒಂದೂವರೆ ದಿನದಲ್ಲೇ ಎಲ್ಲ ಸ್ಥಳಗಳು ತುಂಬಿಹೋದವು. ಗಾಬರಿಯಾಯಿತು. ವಿಚಾರ ಮಾಡಿ ಮತ್ತೆ ೧೦೦ ಅರ್ಜಿಗಳನ್ನು ಬಿಡುಗಡೆ ಮಾಡಿದೆವು. ಒಂದೇ ದಿನದಲ್ಲಿ ಅವೂ ತುಂಬಿದವು. ಇಷ್ಟು ಜನರಿಗೆ ಹೇಗೆ ಆಸನಗಳನ್ನು ಒದಗಿಸಬೇಕೋ ತಿಳಿಯದಾಗಿದೆ. ಅನಾನುಕೂಲವಾದಲ್ಲಿ ದಯವಿಟ್ಟು ಎಲ್ಲರೂ ಸಹಕರಿಸಬೇಕಾಗಿ ವಿನಂತಿಸುತ್ತಿದ್ದೇನೆ. ಊಟದ ಮನೆಯಲ್ಲಿ ಎಲ್ಲ ಕಾರ್ಯಕ್ರಮಗಳನ್ನೂ ನೋಡುವ ಅವಕಾಶವಿದೆ. ಸಭಾಭವನದ ಹೊರಗೆ ಪುಸ್ತಕ ಮಳಿಗೆಗಳ ನಡುವೆ ಎಲ್‌ಸಿಡಿಯಲ್ಲಿಯೂ ನೋಡುವ ಅವಕಾಶವಿದೆ. ಆ ಅವಕಾಶಗಳನ್ನು ತಾವು ಬಳಸಿಕೊಳ್ಳಬಹುದು.

ಒಂದು ಮಾತನ್ನು ವಿಶೇಷವಾಗಿ ಹೇಳುತ್ತಿದ್ದೇನೆ. ಈ ವರ್ಷ ಪ್ರವೇಶಗಳನ್ನು ಸ್ವಲ್ಪ ಹೆಚ್ಚು ಮಾಡಿದ್ದರ ಹಿಂದೆ ಹಣ ಮಾಡಬೇಕೆಂಬ ಉದ್ದೇಶ ಖಂಡಿತ ಇಲ್ಲ. ಪ್ರತಿನಿಧಿ ಶುಲ್ಕದ ಮೌಲ್ಯ ಕಿಟ್, ಪುಸ್ತಕ, ಊಟ–ಉಪಹಾರಗಳ ರೂಪದಲ್ಲಿ ತಿರುಗಿ ಪ್ರತಿನಿಧಿಗಳಿಗೇ ಹೋಗುತ್ತದೆ. ತಾವೆಲ್ಲ ಪ್ರತಿನಿಧಿಗಳಾಗಿ ಬರಲು ತೋರಿಸಿದ ಉತ್ಸಾಹ, ಧಾವಂತಗಳ ಜೊತೆಗೆ ಪ್ರವೇಶ ಸಿಗಲಾರದವರ ಪರದಾಟವನ್ನು ನೋಡಲಾರದೆ ಅನಿವಾರ್ಯವಾಗಿ ಈ ನಿರ್ಣಯ ಕೈಕೊಂಡಿದ್ದೇವೆ. ಬರಬೇಕೆಂಬ ಅಪೇಕ್ಷೆಯುಳ್ಳ ಇನ್ನೂ ಅನೇಕರಿಂದ ಒತ್ತಡ ಬರುತ್ತಲೇ ಇದೆ. ನಮಗಿರುವ ಸೀಮಿತ

ಅವಕಾಶಗಳಿಂದಾಗಿ, ಸೀಮಿತ ಸಂಪನ್ಮೂಲಗಳಿಂದಾಗಿ ಎಲ್ಲ ಆಸಕ್ತರಿಗೂ ವ್ಯವಸ್ಥೆ ಮಾಡಲು ಆಗುತ್ತಿಲ್ಲ ಎಂಬ ಬೇಸರ ನಮಗಿದೆ.

ಸಂಭ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಅಪೇಕ್ಷಿಸುತ್ತಿರುವವರ ಉತ್ಸಾಹ ಎಷ್ಟಿದೆ ಎಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಮೈಸೂರಿನ ಕೃ.ಪ.ಗಣೇಶ ಎಂಬ ಕನ್ನಡ ಅಧ್ಯಾಪಕರೊಬ್ಬರು ನಮಗೊಂದು ಪತ್ರ ಬರೆದಿದ್ದಾರೆ: "ನಾನು ಧಾರವಾಡ ಸಾಹಿತ್ಯ ಸಂಭ್ರಮ-೨೦೧೭ಕ್ಕೆ ದಿನಾಂಕ : ೨೪-೧೨-೨೦೧೬ರಂದು ಶನಿವಾರ ಬೆಳಿಗ್ಗೆ ೧೦ಕ್ಕೆ ಕಾದುಕುಳಿತು ಶೀಘ್ರವಾಗಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡೆ ಎಂದು ತಿಳಿಸಲು ಹರ್ಷಿಸುತ್ತೇನೆ. ಸೃಜನಶೀಲ ಮತ್ತು ಅರ್ಥಪೂರ್ಣ ಸಾಹಿತ್ಯ ಚರ್ಚೆಗೆ ಎಲ್ಲಾ ಪಂಥಗಳನ್ನು ಮತ್ತು ಎಲ್ಲಾ ಪೂರ್ವಗ್ರಹಗಳನ್ನು ಮೀರಿ ಸೂಕ್ತ ವೇದಿಕೆ ನಿರ್ಮಿಸಿಕೊಡುತ್ತಿರುವ ಧಾರವಾಡ ಸಾಹಿತ್ಯ ಸಂಭ್ರಮದೊಂದಿಗೆ ನಿರಂತರವಾಗಿ ಒಡನಾಡಿಯಾಗುತ್ತಿದ್ದೇನೆಂಬ ಹೆಮ್ಮೆ ನನ್ನದು. ಕರ್ನಾಟಕದಲ್ಲಿ ಇಂದು ನಡೆಯುವ ಯಾವುದೇ ಸಾಹಿತ್ಯ ಸಮಾರಂಭಗಳು ವ್ಯಕ್ತಿಕೇಂದ್ರಿತ, ಅನಗತ್ಯ ವೈಭವೀಕರಣ, ಎಡ-ಬಲಗಳ ಅತಿರೇಕದ ಕಿತ್ತಾಟ, ರಾಜಕೀಯದೊಂದಿಗೆ ಅಪವಿತ್ರ ಮೈತ್ರಿ, ಜಾತಿ-ಮತ-ಪಂಥಗಳ ಮೇಲಾಟದ ಜೊತೆಗೆ ಜೊಳ್ಳು ಸಾಹಿತಿ-ಸಾಹಿತ್ಯಗಳ ಕುರಿತ ಚರ್ವಿತ ಚರ್ವಣದ ತೌಡು ಕುಟ್ಟುವ ಪ್ರಕ್ರಿಯೆಗಳ ನಡುವೆ ನಮಗೆ ಭರವಸೆ ಹುಟ್ಟಿಸಿರುವುದು ಧಾರವಾಡ ಸಾಹಿತ್ಯ ಸಂಭ್ರಮ." ಇದು ಒಂದು ಪ್ರಾತಿನಿಧಿಕವಾದ ಅನುಭವ ಎಂದು ನಮ್ಮ ಭಾವನೆ. ನಮಗೂ ಕೂಡ ಭರವಸೆ ಹುಟ್ಟಿಸಿರುವುದು ಈ ಬಗೆಯ ಅದ್ಭುತ ಸ್ಪಂದನ.

ಆನಂದ ಝುಂಜರವಾಡ ಅವರಿಂದ ಒಂದು ಪತ್ರ ಬಂದಿದೆ. ಅವರು ಮಹಾರಾಷ್ಟ್ರದ ನಾಶಿಕದಲ್ಲಿ ನಡೆದ 'ಮರಾಠಿ ಲಿಟರೇಚರ್ ಫೆಸ್ಟಿವಲ್'ಗೆ ಹೋಗಿದ್ದರಂತೆ; ಅವರು ಬರೆಯುತ್ತಾರೆ: "ನನ್ನ ಪಕ್ಕ ಕುಳಿತ ಒಬ್ಬ ಮರಾಠಿ ಲೇಖಕರು ಉಭಯಕುಶಲೋಪರಿಯಂತೆ, 'ನೀವು ಎಲ್ಲಿಂದ ಬಂದಿರುವಿರಿ?' ಎಂದು ಕೇಳಿದರು. ನಾನು, 'ಕರ್ನಾಟಕದ ಧಾರವಾಡದಿಂದ ಬಂದಿರುವೆ' ಎಂದೆ. ಮಾತು ಮುಂದುವರೆಯಿತು. ಅವರು, 'ನಿಮ್ಮ ಧಾರವಾಡದಲ್ಲಿ ಇಂಥದೆ ಒಂದು ಸಂಭ್ರಮ ಎಂಬ ಕಾರ್ಯಕ್ರಮ ನಡೆಯುತ್ತದಲ್ಲವೆ? ನಾ ಕೇಳಿದ್ದೇನೆ- ಅದು ಭಾಳ ಛಲೋ ಆಗುತ್ತದಂತೆ' ಎಂದರು. ಅಂದರೆ ನಮ್ಮ 'ಸಂಭ್ರಮ'ದ ಸುದ್ದಿ ನಾಶಿಕ ದವರೆಗೂ ಹಬ್ಬಿದೆ." ಇದು ನಮಗೆ, ನಿಮಗೆ ಒಂದು ಸಂತಸದ ಸುದ್ದಿ.

ಧಾರವಾಡ ಸಾಹಿತ್ಯ ಸಂಭ್ರಮ ಮುಖ್ಯವಾಗಿ ಕನ್ನಡ ಸಂಸ್ಕೃತಿ-ಸಾಹಿತ್ಯಗಳನ್ನು ಕೇಂದ್ರವಾಗಿ ಇಟ್ಟುಕೊಂಡು ನಡೆಯುತ್ತಿರುವ ಕಾರ್ಯಕ್ರಮ. ಆದರೂ ಇವುಗಳನ್ನು ದಾಟಿದಂತೆ ಕಳೆದ ವರ್ಷ ನಮ್ಮ ಕೃಷಿ ಸಂಸ್ಕೃತಿಯ ಸವಾಲುಗಳನ್ನು ಕುರಿತಂತೆ ಒಂದು ಗೋಷ್ಠಿಯನ್ನು ಏರ್ಪಡಿಸಿದ್ದೆವು. ಅದು ಬಹಳ ಯಶಸ್ವಿಯಾಯಿತು. ಸಭಿಕರು ಅದನ್ನು ಬಹುವಾಗಿ ಇಷ್ಟಪಟ್ಟರು. ಈ ವರ್ಷ ರಾಷ್ಟ್ರೀಯ ಜಲನೀತಿಯನ್ನು ಕುರಿತು ಅಂಥ ಇನ್ನೊಂದು ಗೋಷ್ಠಿಯನ್ನು

ಏರ್ಪಡಿಸಿದ್ದೇವೆ. ಅದು ನಮ್ಮ ರಾಜ್ಯವನ್ನು ಸತತವಾಗಿ ಕಾಡುತ್ತ ಬಂದಿರುವ ಸಮಸ್ಯೆ. ನಮ್ಮ ನದಿಗಳ ನೀರಿನ ಹಂಚಿಕೆಯ ಗೊಂದಲಗಳ ಬಗ್ಗೆ ಈ ಗೋಷ್ಠಿಯ ಮೂಲಕ ಸ್ಪಷ್ಟ ಅರಿವು ಮೂಡಲಿ ಎಂಬುದು ನಮ್ಮ ಉದ್ದೇಶ.

ಸಾಹಿತ್ಯ ಸಂಭ್ರಮಕ್ಕೆ ಪ್ರತಿವರ್ಷ ಒಬ್ಬರನ್ನಾದರೂ ಕನ್ನಡದ ಹೊರಗಿನ ಸಾಹಿತಿಯನ್ನು ಕರೆಸಬೇಕೆಂದು ಅನೇಕ ಜನ ಆಗ್ರಹಿಸುತ್ತಿದ್ದರು. ಏನೇನೋ ಕಾರಣಗಳಿಂದ ಅದು ಸಾಧ್ಯವಾಗಿರಲಿಲ್ಲ. ಈ ವರ್ಷ, ಪುರಾಣ ಕಥೆಗಳ ಆಧುನಿಕ ವಿಶ್ಲೇಷಣೆಯನ್ನು ಒಳಗೊಂಡ ಅನೇಕ ಗ್ರಂಥಗಳನ್ನು ಬರೆದಿರುವ ದೇವದತ್ತ ಪಟ್ಟನಾಯಕರು ಬಂದಿದ್ದಾರೆ. ಅವರ ಮಾತುಗಳು ನಿಮಗೆ ಇಷ್ಟವಾಗಬಹುದು.

ಗೋಷ್ಠಿಗಳು ಸಾಕಷ್ಟು ಪ್ರಸ್ತುತ ಸಮಸ್ಯೆಗಳನ್ನು ಕುರಿತು ಇರುವಂತೆ ಮತ್ತು ವೈವಿಧ್ಯಪೂರ್ಣವಾಗಿರುವಂತೆ ಪ್ರಯತ್ನಿಸಿದ್ದೇವೆ. ಸಾಹಿತ್ಯ ಸಂಭ್ರಮಕ್ಕೆ ನಮ್ಮ ಹಿರಿಯ ಸಾಹಿತಿಗಳೆಲ್ಲ ಒಮ್ಮೆಯಾದರೂ ಬಂದುಹೋಗಲಿ ಎಂಬುದು ನಮ್ಮ ಆಶೆ. ಈ ಬಗ್ಗೆ ದೇಜಗೌ ಅವರನ್ನು ಕೇಳಿದಾಗ, ತಮಗೆ ಈಗ ನೆನಪಿನ ಶಕ್ತಿಯೇ ಉಳಿದಿಲ್ಲ, ಚೆನ್ನಾಗಿ ಮಾಡುತ್ತಿದ್ದೀರಿ ಎಂದು ಕೇಳಿದ್ದೇನೆ, ಮಾಡಿ, ಒಳ್ಳೆಯದಾಗಲಿ ಎಂದರು. ಈಗ ಅವರಿಲ್ಲ. ಪ್ರಭುಶಂಕರ, ಎಂ.ಚಿದಾನಮೂರ್ತಿ, ಜಿ.ಎಸ್.ಸಿದ್ಧಲಿಂಗಯ್ಯ, ಕೆ.ವಿ.ತಿರುಮಲೇಶ್ ಅವರೂ ವಯಸ್ಸು ಮತ್ತು ಆರೋಗ್ಯದ ಕಾರಣಗಳಿಂದಾಗಿ ಬರಲು ಆಗುತ್ತಿಲ್ಲ, ಇವರನ್ನೆಲ್ಲ ನಾವು ಕರೆದಿಲ್ಲ ಎಂದು ನೀವು ಭಾವಿಸಬಾರದೆಂದು ಈ ಮಾತು ಹೇಳುತ್ತಿದ್ದೇನೆ.

ನಮಗೆ ಯಾರನ್ನೂ ದೂರವಿಡುವ ಉದ್ದೇಶವಿಲ್ಲ. ಸಂಭ್ರಮದ ಮೊದಲನೆಯ ವರ್ಷ ಏನೇನೋ ತಪ್ಪು ತಿಳುವಳಿಕೆಗಳಿಂದ ಸಂಭ್ರಮವನ್ನು ವಿರೋಧಿಸಿದ್ದ ಅನೇಕರು ಆಮೇಲೆ ನಮ್ಮ ಉದ್ದೇಶಗಳನ್ನು ಅರ್ಥಮಾಡಿಕೊಂಡು, ಸಂಭ್ರಮಕ್ಕೆ ಬಂದು ಪಾಲುಗೊಂಡಿದ್ದಾರೆ. ಇನ್ನು ಕೆಲವರು ತಮ್ಮ ಹಳೆಯ ಪೂರ್ವಗ್ರಹಗಳಿಗೆ ಅಂಟಿಕೊಂಡು ಪಾಲುಗೊಳ್ಳಲು ನಿರಾಕರಿಸುತ್ತಿದ್ದಾರೆ. ಕೆಲವರಿಗೆ ಈಗ ಬರಬೇಕೆಂದು ಮನಸ್ಸಿದ್ದರೂ, ಹಿಂದಿನ ನಿಲುವಿನ ಮುಜುಗರದಿಂದಾಗಿ ಬರಲು ಹಿಂಜರಿಯುತ್ತಿದ್ದಾರೆ. ತಪ್ಪು ಅಭಿಪ್ರಾಯಗಳನ್ನು ಬದಲಿಸಿಕೊಳ್ಳುವದು ಅವಮಾನದ ವಿಷಯವೇನೂ ಅಲ್ಲ. ಸಂಭ್ರಮಕ್ಕೆ ಬಂದರೆ ಅವರ ಸೈದ್ಧಾಂತಿಕ ನಿಲುವುಗಳು ಬದಲಾಗಬೇಕೆಂದೇನೂ ಇಲ್ಲ. ಭಿನ್ನ ವಾದಗಳನ್ನು ತಾಳ್ಮೆಯಿಂದ ಕೇಳಬೇಕು, ಭಿನ್ನ ಮತಗಳೊಂದಿಗೆ ಅನುಸಂಧಾನ ನಡೆಸಬೇಕು, ತಮ್ಮ ಅಭಿಪ್ರಾಯಗಳನ್ನು ಅವುಗಳನ್ನು ಒಪ್ಪದವರೊಡನೆ ಹಂಚಿಕೊಳ್ಳಬೇಕು. ಯಾವ ಸಿದ್ಧಾಂತವೂ ಗೂಡು ಕಟ್ಟಿಕೊಂಡು ತನ್ನೊಳಗೇ ತಾನು ಕೂತರೆ ಕಾಲಕ್ಕೆ ಅಪ್ರಸ್ತುತವಾಗುತ್ತದೆ. ಅದು ಬೇರೆ ಸಿದ್ಧಾಂತಗಳ ಮುಖಾಮುಖಿಯಲ್ಲಿ ಗಟ್ಟಿಯಾಗಬೇಕು.

ಗೋಷ್ಠಿಗಳಿಗೆ ನಾವು ಕೊಡುತ್ತಿರುವ ಸಮಯವನ್ನು ಹೆಚ್ಚಿಸಬೇಕೆಂದು ಬಹಳ ಜನ ಹೇಳುತ್ತಿದ್ದಾರೆ, ಯಾವ ಕಾರಣಕ್ಕೂ ಸಮಯವನ್ನು ಹೆಚ್ಚಿಸಬೇಡಿರಿ ಎಂದು ಇನ್ನು ಕೆಲವರ ಸಲಹೆ. ಹೆಚ್ಚು ಸಮಯ ಕೊಟ್ಟರೆ ಸಮಯದ ಮಿತಿಯೊಳಗೆ ವಿಷಯವನ್ನು ಚರ್ಚಿಸಿ ಮುಗಿಸಬಹುದೆಂದು ಕೆಲವರ ಭಾವನೆ. ನಮ್ಮ ಅನುಭವದಲ್ಲಿ ಹಾಗೆ ಆಗಿಲ್ಲ.

ಆಗ ಇನ್ನೂ ಹೆಚ್ಚು ಹೊತ್ತು ಮಾತಾಡುತ್ತಾರೆ. ಪ್ರಶ್ನೆ ಕೇಳುವವರು ಭಾಷಣ ಮಾಡತೊಡಗುತ್ತಾರೆ. ಚರ್ಚೆ ಅಪೂರ್ಣವಾಗಿಯೇ ಉಳಿಯುತ್ತದೆ.

ಪ್ರತಿ ವರ್ಷವೂ ಸಾಹಿತ್ಯ ಸಂಭ್ರಮದ ಗೋಷ್ಠಿಗಳಿಗೆ ಸಾಧ್ಯವಾದಷ್ಟೂ, ಹೊಸಬರನ್ನು ಕರೆಯುತ್ತೇವೆ. ಎಷ್ಟೋ ಸಲ, ಮೊದಲು ಬರುತ್ತೇವೆ ಎಂದವರು ಕೊನೆಯ ಕ್ಷಣದಲ್ಲಿ ಬರದೆ ಇದ್ದಾಗ, ಅವಸರದಲ್ಲಿ ಬದಲಾವಣೆ ಮಾಡಿ, ಒಪ್ಪಿಗೆ ಪಡೆದುಕೊಳ್ಳಬೇಕಾಗುತ್ತದೆ. ಹಾಗಿದ್ದೂ, ಹಿಂದಿನ ವರ್ಷಗಳಂತೆ ಈ ವರ್ಷವೂ ಬಹುಪಾಲು ಹೊಸ ಮುಖಗಳಿವೆ. ಗೋಷ್ಠಿಗಳಲ್ಲಿ ಪಾಲ್ಗೊಳ್ಳುವ ೭೦ ಜನರಲ್ಲಿ ೫೦ಕ್ಕಿಂತ ಹೆಚ್ಚು ಜನ ಇದೇ ಮೊದಲ ಬಾರಿಗೆ ಸಂಭ್ರಮದ ವೇದಿಕೆಗೆ ಬರಲಿದ್ದಾರೆ. ಇನ್ನು ಕೆಲವರು ಎರಡನೆಯ ಸಲ ಬರುತ್ತಿದ್ದಾರೆ. ಹಿರಿಯ ಲೇಖಕರನ್ನು ನೋಡಬೇಕೆಂದು ಬಯಸುವ ಹೊಸ ಸಭಿಕರೂ ಇರುತ್ತಾರೆ. ಆದರೂ ಕೆಲವರು, ಸಂಭ್ರಮದಲ್ಲಿ ಮತ್ತೆ ಮತ್ತೆ ಅದೇ ಹಳೆಯ ಮುಖಗಳು ಕಾಣುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಹಿರಿಯರಾದ ಅನೇಕ ಸಾಹಿತಿಗಳು ಆಮಂತ್ರಿತರಾಗಿ ಬರುತ್ತಿದ್ದಾರೆಯೇ ಹೊರತು, ಅವರೆಲ್ಲ ವೇದಿಕೆಗೆ ಬರುವದಿಲ್ಲ. ಇಷ್ಟಾಗಿಯೂ ಹಳೆಯ ಮುಖಗಳನ್ನು ಕಂಡು ಕೆಲವರಿಗೆ ಬೇಸರವಾಗುತ್ತಿದ್ದರೆ, ಅವರಿಗೆಲ್ಲ ಮೇಕಪ್ ಮಾಡಿಕೊಂಡು ಇಲ್ಲವೆ ಮುಖವಾಡ ಧರಿಸಿ ಹೊಸ ಮುಖಗಳೊಂದಿಗೆ ಬರಲು ತಿಳಿಸೋಣ, ನಾನು ಮತ್ತು ನನ್ನಂತೆ ಸಂಘಟನೆಯಲ್ಲಿರುವ ಕೆಲವರು ಕಳೆದ ಐದು ವರ್ಷಗಳಿಂದಲೂ ಸಂಭ್ರಮದಲ್ಲಿ ನಮ್ಮ ಹಳೆಯ ಮುಖಗಳನ್ನು ಹೊತ್ತುಕೊಂಡು ತಿರುಗಾಡುವದು ಅನಿವಾರ್ಯವಾಗಿದೆ. ಅದಕ್ಕೆ ಏನೂ ಮಾಡುವ ಹಾಗಿಲ್ಲ. ದಯವಿಟ್ಟು ನಮ್ಮ ಹಳೆಯ ಮುಖಗಳನ್ನು ಸಹಿಸಿಕೊಳ್ಳಬೇಕಾಗಿ ವಿನಂತಿಸುತ್ತೇವೆ. ಹಾಗೆಯೇ, ಕಳೆದ ಐದು ವರ್ಷಗಳಿಂದಲೂ ಪ್ರತಿನಿಧಿಗಳಾಗಿ ಬರುತ್ತಿರುವ ಅನೇಕ ಹಳೆಯ ಮುಖಗಳೂ ಇವೆ. ಅವುಗಳನ್ನು ನೋಡಿ ನೋಡಿ ನಮಗೇನೂ ಬೇಜಾರಾಗಿಲ್ಲ. ನೀವೂ ಮತ್ತೆ ಬನ್ನಿ, ನಮಗೆ ಸಂತೋಷವಿದೆ. ನಮ್ಮ ಸಾಹಿತಿಗಳ ಮುಖ ಹಳೆಯವಾದರೂ ಅವರ ಮುಖದಿಂದ ಬರುವ ಮಾತು ಹೊಸವಾಗಿರುತ್ತವೆ ಎಂಬ ಭರವಸೆ ಕೊಡುತ್ತೇವೆ.

ಅಂತೂ, ಗೋಷ್ಠಿಗಳಲ್ಲಿ ಭಾಗವಹಿಸುವವರು ಮತ್ತು ಆಮಂತ್ರಿತರು ಸೇರಿ ಎರಡುನೂರು ಜನ ಹಿರಿಯ ಕಿರಿಯ ಸಾಹಿತಿಗಳು ಇಲ್ಲಿ ಸೇರುತ್ತಿದ್ದಾರೆ. ನಮ್ಮ ಲೇಖಕರೆಲ್ಲ ಒಂದು ಕಡೆ ಸೇರಿ ಮಾತಾಡಿಕೊಳ್ಳುವದೇ ಒಂದು ಅನುಭವ. ಸಾಹಿತ್ಯಾಭಿಮಾನಿಗಳಂತೂ ಈ ಅವಕಾಶದಿಂದಾಗಿ ಬಹಳ ಉತ್ಸಾಹಿತರಾಗಿದ್ದಾರೆ. ಸದಾ ಮಿಂಚುವ ಸೆಲ್ಫಿಗಳದೇ ಒಂದು ಸಂಭ್ರಮ.

ಕಳೆದ ವರ್ಷದಂತೆ ಈ ವರ್ಷವೂ www.vividlipi.com ಮೂಲಕ ಜನೆಯ ಧಾರವಾಡ ಸಾಹಿತ್ಯ ಸಂಭ್ರಮದ ಎಲ್ಲ ಕಾರ್ಯಕ್ರಮಗಳನ್ನು livestreaming ಮೂಲಕ ಪ್ರಸಾರ ಮಾಡುತ್ತಿದ್ದೇವೆ. ಜಗತ್ತಿನ ಯಾವದೇ ಮೂಲೆಯಲ್ಲಿರುವ ಆಸಕ್ತ ಕನ್ನಡಿಗರು ಅದೇ ಕಾಲಕ್ಕೆ ಡೌನ್‌ಲೋಡ್ ಮಾಡಿಕೊಂಡು ನೋಡಬಹುದು. ಅಥವಾ

ಮುಂದೆಯೂ ತಮಗೆ ಅನುಕೂಲವಾದಾಗ ನೋಡಬಹುದು. ಕಳೆದ ವರ್ಷ ಸುಮಾರು ಇಪ್ಪತ್ತು ಸಾವಿರ ಜನ ವಿಶ್ವಾದ್ಯಂತ ಇದರ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತದೆ. ಕನ್ನಡ ಬೆಳೆಯಲು ಇಂಥ ಹೊಸ ಆವಿಷ್ಕಾರಗಳ ಉಪಯೋಗ ಮಾಡಿಕೊಳ್ಳಬೇಕು.

ಕೊನೆಯದಾಗಿ ಒಂದು ನೋವಿನ ಸಂಗತಿ. ಸಂಭ್ರಮದ ಗೌರವಾಧ್ಯಕ್ಷರಾಗಿದ್ದ ದಿ.ಎಂ.ಎಂ. ಕಲಬುರ್ಗಿಯವರ ಹತ್ಯೆಯಾಗಿ ಒಂದೂವರೆ ವರ್ಷ ಕಳೆದಿದ್ದರೂ ಇನ್ನೂ ಅಪರಾಧಿಗಳ ಪತ್ತೆ ಆಗಿಲ್ಲ. ಹೀಗೆ ಕೊಲೆಮಾಡಿ ಸುರಕ್ಷಿತವಾಗಿ ತಪ್ಪಿಸಿಕೊಳ್ಳುವ ಸ್ಥಿತಿ ನಿರ್ಮಾಣವಾದರೆ ಮೂಲಭೂತವಾದಕ್ಕೆ ಕುಮ್ಮಕ್ಕು ಕೊಟ್ಟಂತಾಗುತ್ತದೆ. ಅಪರಾಧಿಗಳನ್ನು ಆದಷ್ಟು ಬೇಗ ಪತ್ತೆ ಹಚ್ಚಿ ಶಿಕ್ಷಿಸಬೇಕೆಂದು ಸಾಹಿತ್ಯ ಸಂಭ್ರಮ ಕರ್ನಾಟಕ ಸರಕಾರವನ್ನು ಮತ್ತೊಮ್ಮೆ ಒತ್ತಾಯಿಸುತ್ತದೆ.

ಹಾಗೆಯೇ, ಕಲಬುರ್ಗಿಯವರ ಹೆಸರಿನಲ್ಲಿ ಸಂಶೋಧನ ಕೇಂದ್ರವೊಂದನ್ನು ಆರಂಭಿಸುವದಾಗಿ ಕರ್ನಾಟಕ ಸರಕಾರ ಘೋಷಣೆ ಮಾಡಿತ್ತು. ಮುಂದೆ ಅದೇನಾಯಿತೋ ಗೊತ್ತಾಗಲಿಲ್ಲ. ಈ ಬಗ್ಗೆ ಸರಕಾರ ತಜ್ಞರ ಸಲಹೆ ಪಡೆದು, ಧಾರವಾಡದಲ್ಲಿ ಬೇಗ ಸ್ವತಂತ್ರ ಸಂಶೋಧನ ಕೇಂದ್ರವನ್ನು ಆರಂಭಿಸಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

ಸಂಭ್ರಮವನ್ನು ಮುಗಿಸಿಕೊಂಡು ತಿರುಗಿ ಹೋದ ಮೇಲೆ, ನಿಮ್ಮ ಅಭಿಪ್ರಾಯಗಳನ್ನು ಬರೆದು ತಿಳಿಸಿರಿ. ಸಂಭ್ರಮವನ್ನು ಇನ್ನಷ್ಟು ಉತ್ತಮಗೊಳಿಸಲು ನಿಮ್ಮ ಸಲಹೆಗಳಿದ್ದರೆ ತಿಳಿಸಿರಿ. ಸಾಧ್ಯವಾದುವನ್ನು ಅಳವಡಿಸಿಕೊಳ್ಳುತ್ತೇವೆ.

ಬರ್ರಿ, ಎಲ್ಲರೂ ಕೂಡಿ ಈ ಸಂಭ್ರಮವನ್ನು ಅರ್ಥಪೂರ್ಣಗೊಳಿಸೋಣ.

**ಗಿರಡ್ಡಿ ಗೋವಿಂದರಾಜ**
**ಅಧ್ಯಕ್ಷರು**
**ಧಾರವಾಡ ಸಾಹಿತ್ಯ ಸಂಭ್ರಮ ಟ್ರಸ್ಟ್**